ಆ), ಇ) ಇದು ನಿಜವಲ್ಲ. 1988 ರಿಂದ 1996 ರ ಮೇ ಅಂತ್ಯದವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇಂಜಿನಿಯರ್‌ಗಳಿಗೆ ಪದೋನ್ನತಿ (ಮೇಲ್ದರ್ಜೆಗೆ ಬಡ್ತಿ) ನೀಡಿದ ವಿವರಗಳು ಈ ಕೆಳಕಂಡಂತಿವೆ.

		ಪದೋನ್ನತಿ ಹೊಂದಿದ ಇಂಜಿನಿಯರ್‌ಗಳ ಸಂಖ್ಯೆ
1.	ಮುಖ್ಯ ಇಂಜಿನಿಯರ್ (ವಿ) ಹುದ್ದೆಯಿಂದ ಪ್ರಧಾನ ಇಂಜಿನಿಯರ್ (ವಿ) ಹುದ್ದೆಗೆ.	9
2.	ಅಧೀಕ್ಷಕ ಇಂಜಿನಿಯರ್(ವಿ) ಹುದ್ದೆಯಿಂದ ಮುಖ್ಯ ಇಂಜಿನಿಯರ್ (ವಿ) ಹುದ್ದೆಗೆ	45
3.	ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಯಿಂದ ಅಧೀಕ್ಷಕ ಇಂಜಿನಿಯರ್ (ವಿ) ಹುದ್ದೆಗೆ	99
4.	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಯಿಂದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಗೆ	240
5.	ಸಹಾಯಕ ಇಂಜಿನಿಯರ್(ವಿ) ಹುದ್ದೆಯಿಂದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಗೆ.	563
	ಒಟ್ಟು	956

ವಿಷಯ :- ಕೋಜೆಂಟ್ರಿಕ್ಸ್ ವಿದ್ಯುತ್ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 925 (1562)

ಶ್ರೀ ಬಸವನಗೌಡ ಆರ್. ಪಾಟೀಲ್ (ವಿಜಾಪುರ) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬಹು ಚರ್ಚಿತ ಮಹತ್ವಾಕಾಂಕ್ಷಿ ಯೋಜನೆಯಾದ ಕೋಜೆಂಟ್ರಿಕ್ಸ್ ವಿದ್ಯುತ್ ಉತ್ಪಾದನಾ ಯೋಜನೆಗೆ ಕೇಂದ್ರ ಸರ್ಕಾರದವರ ಅನುಮತಿ ದೊರಕಿದೆಯೇ?

ಆ) ದೊರಕಿದ್ದರೆ ಈ ಯೋಜನೆಯ ಪೂರ್ಣ ಅಂದಾಜು ಎಷ್ಟು?

ಇ) ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಎಷ್ಟು? ಹಾಗೂ ಉತ್ಪಾದಿಸುವ ಪ್ರತಿ ಯೂನಿಟ್ಟಿನ ದರವೇನು?

ಈ) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುವುದು ಮತ್ತು ಈ ಯೋಜನೆಯಿಂದ ಕರ್ನಾಟಕ ವಿದ್ಯುತ್ ಕೊರತೆಯ ಪರಿಸ್ಥಿತಿಯು ಸುಧಾರಿಸುವುದೇ?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ (ಇಂಧನ ರಾಜ್ಯ ಸಚಿವರು) :-

ಆ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉತ್ಪಾದನಾ ಸಮರ್ಥ್ಯವು 1000 ಮೆಗಾವಾಟ್ಸ್ ಹಾಗೂ ಉತ್ಪಾದಿಸುವ ಪ್ರತಿ ಯೂನಿಟ್ಟಿನ ದರ ರೂ. 2.34 ಪೈಸೆ 30 ವರ್ಷಗಳಿಗೆ ರೂ. 2.05 ಪೈಸೆ (ತಾತ್ಕಾಲಿಕ).

ಈ) ಈ ಯೋಜನೆಯು ಕ್ರಿ. ಶ 2000 ವರ್ಷದಲ್ಲಿ ಪೂರ್ಣಗೊಳ್ಳುವುದು. ಈ ಯೋಜನೆಯಿಂದ ಕರ್ನಾಟಕ ವಿದ್ಯುತ್ ಕೊರತೆಯು ಬಹಳಷ್ಟು ಸುಧಾರಣೆ ಯಾಗುವುದು.

ವಿಷಯ :- ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 926 (331)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ಅವು ಯಾವುವು?

ಆ) ಅವುಗಳನ್ನು ಭರ್ತಿ ಯಾವಾಗ ಮಾಡಲಾಗುವುದು?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ್ (ಇಂಧನ ರಾಜ್ಯ ಸಚಿವರು) :-

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ 31-3-96 ರ ಅಂತ್ಯದಲ್ಲಿರುವಂತೆ ಖಾಲಿ ಇದ್ದ ಹುದ್ದೆಗಳ ಒಟ್ಟು ಸಂಖ್ಯೆ 13,013 ಹುದ್ದೆವಾರು ಸಂಖ್ಯೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.